ಕಟ್ಟಿಕೊಡುವಂಥ ಕತೆಗಳಿದ್ದರೆ ಕಳುಹಿಸಿ. ನೀವು ನೆಲೆ ನಿಂತ ನಗರವೂ ಇಂಥ ಹುಡುಕಾಟಕ್ಕೆ ಸಾಥ್ ನೀಡಬಲ್ಲದು. ನಿಮ್ಮೊಳಗೊಬ್ಬ ಅದ್ಭುತ ಕತೆಗಾರನಿದ್ದಾನೆ ಎಂಬ ಅರಿವಿನೊಂದಿಗೆ ಈ ಸಲಹೆ ನೀಡಲಾಗುತ್ತಿದೆ' ಎಂದು ಬರೆದಿದ್ದರು.

ಹೊಸಬಣ್ಣನೂ ನಗರಪ್ರಜ್ಞೆಯನ್ನು ಅದರ ಸೂಕ್ಷ್ಮತೆಗಳನ್ನು ಕಥೆಗಳಲ್ಲಿ ಹಿಡಿದಿಡುವ ಪ್ರಯತ್ನ ಮಾಡಿದ್ದ. ಮಹಾನಗರದ ಬಾಹ್ಯ ಚಹರೆಗಳಲ್ಲಿ ಇಲ್ಲಿಯ ಅಸಹಾಯಕತೆ, ಪರಕೀಯತೆ, ನಿರುದ್ದಿಶ್ಯ ಧಾವಂತಗಳನ್ನು ಅರಿಯುವುದು ಅವನಿಗೆ ಅಂಥ ಕಷ್ಟವೇನಾಗಿರಲಿಲ್ಲ. ಆದರೆ ಅಂಥ ಪ್ರಯತ್ನಗಳು ಅವನ ಗ್ರಾಮೀಣ ಸಂವೇದನೆಗಳಲ್ಲಿಯೇ ಮೂರ್ತಗೊಳ್ಳುತ್ತಿದ್ದವು. 'ಮಹಾನಗರದೊಳಗಿದ್ದೂ ಮಹಾನಗರದವನಂತಾಗದ' ಭಾವವೊಂದು ಹಾಗೇ ಇರುತ್ತಿತ್ತು. ಈಗ ನಾಗರತಿಯ ಸಂಪರ್ಕದೊಂದಿಗೆ, ಅವಳ ಕಣ್ಣುಗಳ ಮೂಲಕ ಮಹಾನಗರವನ್ನು ಕಾಣುವ, ಅವಳ ಅನುಭವಗಳಿಂದ ನಗರ ಸಂವೇದನೆಗಳನ್ನು ಅರಿಯುವ ಸಾಧ್ಯತೆಯೊಂದು ಗರಿಗೆದರಿ ಹೊಸಬಣ್ಣ ಹುರುಪಿನಲ್ಲಿದ್ದ. ಅದೃಷ್ಟವಿದ್ದರೆ ನಾಗರತಿಯೊಂದಿಗೆ ಹೊಸತೊಂದು ಕಥೆಯೇ ಸಂಭವಿಸಬಹುದು!

ಸಂದೇಶಗಳ ವಿನಿಮಯದೊಂದಿಗೆ ಒಂದಿಷ್ಟು ಆಪ್ತತೆಗೆ ಬಂದಿದ್ದರೂ, ಇಷ್ಟು ಬೇಗ ನಾಗರತಿಯನ್ನು ಭೇಟಿಯಾಗುವ ಅವಕಾಶವನ್ನು ಹೊಸಬಣ್ಣ ನಿರೀಕ್ಷಿಸಿರಲಿಲ್ಲ. ಬಹುಶಃ ನಾಗರತಿಯಲ್ಲೂ ಅವಳದೇ ಆದ ಅಜೆಂಡಾ ಇತ್ತು!

'ಕವಿಗಳಿಗೆ ಪುರಸೊತ್ತಿದ್ರೆ ಈ ವೀಕೆಂಡಲ್ಲಿ ಸಿಗೋಣವೆ?' ಎಂದು ನಾಗರತಿ ಮೆಸೇಜ್ ಮಾಡಿದಾಗ ಹೊಸಬಣ್ಣನ ಕಿವಿಗಳು ಮತ್ತೆ ಬೆಚ್ಚಗಾದವು.

'ಚೆಲುವೆಯರ ಆಮಂತ್ರಣವನ್ನು ತಿರಸ್ಕರಿಸಿ ನರಕಕ್ಕೆ ಹೋಗಲಾರೆ' ಎಂದು ಮರುಮೆಸೇಜ್ ಮಾಡಿದ.

ಭೇಟಿಯ ಸ್ಥಳ ಮತ್ತು ಸಮಯವನ್ನು ನಾಗರತಿಯೇ ಅಂತಿಮಗೊಳಿಸಿದಳು. 'ಜುಹೂ ಇಸ್ಕಾನ್ ನೋಡಿದಿರಾ? ಲಂಚ್‌ಗೂ ಪಂಚಾಯ್ತಿಗೂ ಅದು ಬೆಸ್ಟ್ ಪ್ಲೇಸು. ನನಗದು ಸಮೀಪ ಕೂಡ' ಎಂದಳು. ಹೊಸಬಣ್ಣ ಮೀಸೆಗೆ ಬಣ್ಣ ಹಚ್ಚುವುದು, ಕಿವಿ ಹತ್ತಿರದ ಕೂದಲು ಕಟ್ ಮಾಡುವಂಥ ಚಿಕ್ಕ ಪುಟ್ಟ ರಿಪೇರಿಗಳನ್ನು ಮಾಡಿಕೊಂಡ. ತಾರುಣ್ಯದ ಸುಪ್ತ ಕಾಮನೆಗಳು ಮುಖದಲ್ಲಿ ಮೀಸೆಯಾಡಿಸುತ್ತಿದ್ದವು. 'ನಾಗರತಿ ಜೊತೆಗೆ ಸೆಲ್ಫಿ ತೆಗೆದು ವಾಟ್ಸಾಪ್ ಗ್ರೂಪಲ್ಲಿ ಪೋಸ್ಟ್ ಮಾಡಿ ಸರ್ಪ್ರೈಸ್ ಮಾಡ್ತೇನೆ. ನನ್ನನ್ನು ಗೇಲಿ ಮಾಡುವ ಈ ಬೋಳಿಮಕ್ಕು ಎದೆ ಒಡ್ಕೊಳ್ಳಲಿ' ಎಂದು ಸ್ವತಃ ಎದೆ ಒಡೆದುಹೋಗುವಷ್ಟು ಖುಷಿಯಲ್ಲಿ ಟ್ಯಾಕ್ಸಿ ಹಿಡಿದು 'ಚಲೋ, ಜುಹೂ ಬೀಚ್' ಎಂದ.

*

ನಾಗರತಿ ಮೋಹಕವಾಗಿ ಕಾಣುತ್ತಿದ್ದಳು. ವಯಸ್ಸು ಅವಳ ಸೌಂದರ್ಯಕ್ಕೆ ಹೊಸ ಕಳೆಯನ್ನೇ ನೀಡಿತ್ತು. ತಿಳಿ ಗುಲಾಬಿ ಬಣ್ಣದ ಫ್ರಾಕ್ ಆಕರ್ಷಕವಾಗಿತ್ತು.



ರೇಶಿಮೆಯಂಥ ಕೂದಲು ನುಣುಪಾದ ಭುಜಗಳನ್ನು ಸ್ಪರ್ಶಿಸುವಷ್ಟು ಉದ್ದವಾಗಿತ್ತು. ಫ್ರಾಕು ಬಿಳಿಬಿಳಿ ಮಂಡಿ ತೆರೆದಿರುವ ಅಳತೆಯಲ್ಲಿತ್ತು. ಲಿಪ್‌ಸ್ಟಿಕ್ ಬಣ್ಣ ಗಾಢವಾಗಿದ್ದರೂ, ಅವಳ ಕಪ್ಪು ಕಣ್ಣುಗಳು, ಮಿಂಚುವ ಬಿಳುಪು ಹಲ್ಲುಗಳು ಅದನ್ನು ಸೌಮ್ಯಗೊಳಿಸಿದ್ದವು. ಅವಳ ಕಾಂತವಲಯ ಅವನ ಚಿತ್ತವನ್ನು ಚಂಚಲಗೊಳಿಸಿತ್ತು. ಅದನ್ನು ಗ್ರಹಿಸಿಯೇ ನಾಗರತಿ, 'ಕವಿರತ್ನ ಕಾಳಿದಾಸರು ಶಕುಂತಲೆಯನ್ನು ಹೀಗೆ ದುರುಗುಟ್ಟುವುದು ತರವೇ?' ಎಂದು ನಕ್ಕಳು. 'ಪರವಾಗಿಲ್ಲ, ನೀವು ಅಂಕೋಲಿಗೆ ಕೈಕೊಟ್ಟರೂ ಕನ್ನಡ ನಿಮ್ಮ ಕೈ ಬಿಟ್ಟಿಲ್ಲ' ಎಂದ. 'ಅಂಕೋಲೆಯಲ್ಲಿ ಘಟಾನುಘಟಿ ಪ್ರೊಫೆಸ್ಸರುಗಳಿಂದ ಕನ್ನಡ ಕಲಿತದ್ದು